**ಸಾಕ್ಷಿಯನ್ನು ದಿನಾಂಕ 30.01.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲು- ಫಿರ್ಯಾದಿ ಪರ ವಕೀಲರಿಂದಃ-**

ನಾನು 8ನೇ ತರಗತಿ ಓದಿದ್ದೇನೆ. ನಿ.ಪಿ1 ಚೆಕ್ ನನ್ನದೇ ಮತ್ತು ಅದರಲ್ಲಿ ಇರುವ ಸಹಿಯು ನನ್ನದೇ. ಆದರೆ ಅದರಲ್ಲಿರುವ ಒಕ್ಕಣೆಗಳನ್ನು ನಾನು ಬರೆದಿಲ್ಲ. ಈ ಪ್ರಕರಣ ಹಾಕುವ ಪೂರ್ವದಲ್ಲಿ ಪಿರ್ಯಾದಿಯು ಚೆಕ್ ಬೌನ್ಸ್ ಆಗಿರುವ ಬಗ್ಗೆ ನನಗೆ ನೋಟೀಸು ನೀಡಿದ್ದಾರೆ ಎಂದರೆ ಹೌದು, ಸದರಿ ನೋಟೀಸಿಗೆ ನಾನು ಪ್ರತಿ ಉತ್ತರವನ್ನು ನಿ.ಪಿ 10 ರಂತೆ ನೀಡಿದ್ದೇನೆ ಎಂದರೆ ಸರಿ. ಸದಡಿ ಪ್ರತಿ ಉತ್ತರವನ್ನು ಕೊಡುವಾಗ ನಾನು ಮತ್ತು ನನ್ನ ಗಂಡ ನಮ್ಮ ವಕೀಲರಿಗೆ ಮಾಹಿತಿ ನೀಡಿದ್ದೇವೆ ಎಂದರೆ ಸರಿ. ನಾನು ಮತ್ತು ನನ್ನ ಗಂಡ ಪಿರ್ಯಾದಿಯ ಬಳಿ ಎಷ್ಟು ಹಣ ವ್ಯವಹಾರ ಮಾಡಿದ್ದೀರಾ ಎಂಬ ಪ್ರಶ್ನೆಗೆ ನನಗೆ ಪಿರ್ಯಾದಿ ಗೊತ್ತೇ ಇಲ್ಲ, ನನ್ನ ಗಂಡ ಮತ್ತು ಅವರು ವ್ಯವಹಾರ ಮಾಡಿರಬಹುದು. ನಮ್ಮ ವಕೀಲರಿಗೆ ನಿ.ಪಿ3 ನೋಟೀಸನ್ನು ಓದಿ ಅರ್ಥ ಮಾಡಿಕೊಂಡು ಪ್ರತಿ ಉತ್ತರ ನೀಡಿರುತ್ತಿರಾ ಎಂಬ ಪ್ರಶ್ನೆಗೆ ನಮ್ಮ ವಕೀಲರಿಗೆ ಹೋಗಿ ವಿಚಾರವನ್ನು ತಿಳಿಸಿದೆ, ಅವರು ನಾನು ಪ್ರತಿಉತ್ತರವನ್ನು ಕೊಡುತ್ತೇನೆ ಎಂದು ಹೇಳಿದರು. ನೋಟೀಸು ನನಗೆ ತಲುಪಿತು.

2. ನಾನು ಪಿರ್ಯಾದಿಯನ್ನು ನೋಡಿದ್ದೇನೆ, ಆದರೆ ಎಂದೂ ಮಾತನಾಡಿಸಿಲ್ಲ. ಪಿರ್ಯಾದಿಗೆ ನಾವು ಹೊಟೇಲ್ ನಲ್ಲಿ ನಾಲ್ಕು ಲಕ್ಷ ಹಣವನ್ನು ನಗದು ರೂಪದಲ್ಲಿ ಕೊಟ್ಟವು. ನಾನು ಮತ್ತು ನನ್ನ ಗಂಡ ಬ್ಯಾಂಕ್ ಖಾತೆಗಳನ್ನು ಹೊಂದಿದ್ದೇವೆ. ನಾನು ಪೋನ್ ಪೇ ಹೊಂದಿಲ್ಲ, ನನ್ನ ಗಂಡ ಹೊಂದಿದ್ದಾರೆ. ಹಣವನ್ನು ಕೊಟ್ಟಾಗ ಯಾವುದೇ ದಾಖಲೆ ಬರೆಸಿಕೊಂಡಿಲ್ಲ, ಚೆಕ್ ಅನ್ನು ಸಹ ವಾಪಸ್ಸು ಕೇಳಿದೆವು. ಹಣವನ್ನು ಕೊಟ್ಟಾಗ ನಾನು, ನನ್ನ ಗಂಡ ಮತ್ತು ರವಿಕುಮಾರ್ ಹೋಗಿದ್ದೆವು. ಹಣವನ್ನು ಪಿರ್ಯಾದಿಗೆ ಮರುಪಾವತಿಸಲು ಹೊಟೇಲಿಗೆ ಹೋಗುವ ಪೂರ್ವದಲ್ಲಿ ನಿಮ್ಮ ಗಂಡ ಅವರನ್ನು ಎಷ್ಟು ವ್ಯವಹಾರ ಪಿರ್ಯಾದಿಯೊಂದಿಗೆ ಮಾಡಿರುತ್ತೀರಾ ಎಂಬುದನ್ನು ಕೇಳಿ ತಿಳಿದುಕೊಂಡಿರುತ್ತೀರಾ ಎಂದರೆ ಕೇಳಿದೆ, ಅವರು ಅಕ್ಕಪಕ್ಕದ ಅಂಗಡಿಯವರಿಗೆ ರೂ.20,000/- ದಂತೆ 5ಜನಕ್ಕೆ ದುಡ್ಡನ್ನು ಕೊಡಿಸಿ ಶ್ಯೂರಿಟಿ ಹಾಕಿರುತ್ತಾರೆ ಎಂದು ನನಗೆ ಅವರ ಸ್ನೇಹಿತರು ತಿಳಿಸಿರುತ್ತಾರೆ. ನಿ.ಪಿ.10 ಪ್ರತಿ ಉತ್ತರದಲ್ಲಿ ಈ ವಿಚಾರವನ್ನು ಹೇಳಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ, ಆದರೆ ಈ ವಿಚಾರವನ್ನು ನಮ್ಮ ವಕೀಲರಿಗೆ ತಿಳಿಸಿದೆ. ನಮ್ಮ ವಕೀಲರ ಮೂಲಕ ನಿಚಿ10ರಲ್ಲಿ ಈ ವಿಚಾರ ತಿಳಿಸಿರುತ್ತಾರೋ ಇಲ್ಲವೋ ಎಂಬುದನ್ನು ಓದಿ ತಿಳಿದುಕೊಂಡಿಲ್ಲ. ನಿ.ಪಿ10 ಪ್ರತಿ ಉತ್ತರದಲ್ಲಿ ನಾನು ಮತ್ತು ನನ್ನ ಗಂಡ ನಾಲ್ಕು ಲಕ್ಷ ಹಣವನ್ನು ಪಡೆದಿದ್ದೇವೆ ಎಂದು ಒಪ್ಪಿ ಕೊಂಡಿದ್ದೇವೆ ಎಂದರೆ ಸರಿಯಲ್ಲ.

3. ನಾವು ಎರಡು ವರ್ಷಗಳ ಹಿಂದೆ ಪಿರ್ಯಾದಿಗೆ ಹಣ ವಾಪಸ್ಸು ನೀಡಿದ್ದೇವೆ. ನಾನು ಮತ್ತು ನನ್ನ ಗಂಡ ನಮ್ಮ ಮನೆಯ ಗೃಹ ಉಪಯೋಗಕ್ಕೆ ನಾಲ್ಕು ಲಕ್ಷ ಹಣವನ್ನು ಪಿರ್ಯಾದಿಯಿಂದ ಪಡೆದು ಸದರಿ ಮೊತ್ತವನ್ನು ಮರುಪಾವತಿಸಲು ಪ್ರಶ್ನಿತ ಚೆಕ್ ಗಳನ್ನು ಕೊಟ್ಟಿದ್ದರೂ ಸಹ ಈಗ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಖಾಲಿ ಚೆಕ್ ಗಳನ್ನು ಪಿರ್ಯಾದಿ ದುರುಪಯೋಗಪಡಿಸಿಕೊಂಡಿದ್ದಾರೆಂದು ಯಾವುದೇ ಕಾನೂನು ಕ್ರಮ ಕೈಗೊಂಡಿಲ್ಲ. ದುಡ್ಡನ್ನು ಮರುಪಾವತಿಸಿದ ನಂತರ ಅವರ ಬಳಿ ಇದ್ದಂತಹ ಚೆಕ್ ಗಳನ್ನು ಹಿಂತಿರುಗಿಸಿ ಎಂದು ಯಾವುದೇ ನೋಟೀಸ್ ಕೊಟ್ಟಿಲ್ಲ. ಪಿರ್ಯಾದಿಯಿಂದ ನಮ್ಮ ಗೃಹ ಬಳಕೆಗೆ ಸಾಲವನ್ನು ಪಡೆದು ಅದನ್ನು ನಮ್ಮ ಗೃಹ ಬಳಕೆಗೆ ಉಪಯೋಗಿಸಿಕೊಂಡು ಈಗ ಮರುಪಾವತಿಸದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಿರ್ಯಾದಿಯು ನಮ್ಮಿಂದ ಭದ್ರತೆಗಾಗಿ ಯಾವುದೇ ಚೆಕ್ ಗಳನ್ನು ಪಡೆದಿಲ್ಲ, ಅವುಗಳನ್ನು ನಾನೇ ಸಾಲದ ಮರುಪಾವತಿಗಾಗಿ ಕೊಟ್ಟಿದ್ದು ಎಂದರೆ ಹೌದು, ಅವುಗಳನ್ನೇ ಹಿಂತಿರುಗಿಸಿ ಎಂದು ಕೇಳಿದೆ. ನನ್ನ ಹಿಂದಿನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಚಾರಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ.

4. ಪಿರ್ಯಾದಿಯನ್ನು ನಾನು ನೋಡಿದ್ದೇನೆ, ಆದರೆ ಅವರೊಂದಿಗೆ ಮಾತನಾಡಲಿಲ್ಲ. ಆದರೆ ನನ್ನ ಗಂಡನಿಗೆ ಗೊತ್ತು, ಎಷ್ಟು ವರ್ಷ ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ನಾನು ಮತ್ತು ನನ್ನ ಗಂಡ ಪಿರ್ಯಾದಿಗೆ ಹಣವನ್ನು ಕೊಡದೆ ಅದನ್ನು ಲಪಟಾಯಿಸಬೇಕು ಎಂಬು ದುರುದ್ದೇಶದಿಂದ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಗಂಡನಾಗಲೀ ಪಿರ್ಯುಲಾಲದಿಗೆ ಎಂದೂ ನಾಲ್ಕು ಲಕ್ಷ ಹಣವನ್ನು ಮರುಪಾವತಿಸಿಲ್ಲ ಎಂರದೆಸ ರಿಯಲ್ಲ. ಚೆಕ್ ಮುಖಾಂತರ ಹಣವನ್ನು ಮರುಪಾವತಿಸಲು ಯಾದಾದದರರೂ ಅಭ್ಯಂತರ ಇತಈತ ಎಂಬ ಪ್ರಶ್ನೆಗೆ ಅವರು ನನಗದು ರುಪಾದಲ್ಲಿ ಕೊಟ್ಟರು, ಅದಕ್ಕೆ ನಾವು ನಂಗದು ರೂಪದಲ್ಲಿ ಕೊಟ್ಟವು. ಚೆಕ್ ಮುಖಾಂತರ ಕೊಡಲು ನಮಗೆ ಯಾವುದೇ ಅಭ್ಯಂತರವಿರಲಿಲ್ಲ. ಹಣವನ್ನು ಕೊಡಲು ತಪ್ಪಿ ಸಿಕೊಳ್ಳುವ ಉದ್ದೇಶದಿಂದ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದೆರ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ. ಇ)**

**2ನೇ ಹೆಚ್ಚುವರಿ ಲಘು ವ್ಯವಹಾರಗಳ**

**ನ್ಯಾಯಾಧೀಶರು, ಬೆಂಗಳೂರು.**